ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಒಳ್ಳೆಯ ವಿದ್ಯಾರ್ಥಿ ಆಗಲು ಬುದ್ಧಿ ಮುಖ್ಯವೋ, ಶಿಸ್ತು ಮುಖ್ಯವೋ?




ಏಕಾಗ್ರತೆ ಮುಖ್ಯ. ಅದಿರದೆ ಇವೆರಡು ಇದ್ದರೂ ವ್ಯರ್ಥ.

ಭಾರತೀ ಗಂಗಾಧರ್, ಬೆಂಗಳೂರು
ಇಂದು ಕಾರಿಲ್ಲದ ಮನೆಯಿಂದ ಸಾಸಿವೆ ತೆಗೆದುಕೊಂಡು ಬಾ ಎಂದು ಕೇಳಬಹುದೆ?
ಕಾರಿಲ್ಲದವರು ಸಿಕ್ಕಿಯಾರು. 'ದ್ವೇಷ ಕಾರಿಲ್ಲದ', 'ಕೆಂಡ ಕಾರಿಲ್ಲದ' ಎಂದರೆ ಸೂಕ್ತ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ವಿವಾಹದ ವೇಳೆಯಲ್ಲಿ ಶುಭ ಮುಹೂರ್ತ ನೋಡುವುದೇಕೆ?
ದಶಕಗಳ ಕಾಲ ನಡೆಯುವ ಸೆಣಸಾಟಕ್ಕೆ ಮುನ್ನೆಚ್ಚರಿಕೆ ಅವಶ್ಯವೆಂದು.

ಮಲ್ಲಿಕಾರ್ಜುನ, ಸುರಧೇನುಪುರ
ನಾಟಿ ಹಸುಗಳ ಕೆಚ್ಚಲಿಗೆ ಕೈ ಹಾಕಿದರೆ ಒದೆಯುತ್ತವೆ. ಸೀಮೆ ಹಸುಗಳೇಕೆ ಒದೆಯುವುದಿಲ್ಲ?



ಒದ್ದರೂ ಹಾಲು ಕೊಡಲೇಬೇಕಾದ್ದರಿಂದ ವೃಥಾ ವೈರ ಬೇಡವೆಂದು.

ಬೂಕನಕೆರೆ ವಿಜೇಂದ್ರ, ಮೈಸೂರು
ಶ್ರೀಮಂತರ ಮನೆಗಳಲ್ಲಿ ಸಾಕಿದ ನಾಯಿಗಳು ಬೊಗಳುವುದೇ ಇಲ್ಲವಲ್ಲ?
ಬೇಕಾದ್ದೆಲ್ಲ ಸಿಕ್ಕಿದ್ಮೇಲೆ ಬಡ್ಕೊಳ್ಳೋದು ವೇಸ್ಟೂಂತ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ರಸ್ತೆ ಅಪಘಾತದಲ್ಲಿ ಮೃತರಾದ ತಕ್ಷಣ ಪರಿಹಾರ ಬೆಲೆ ನಿಗದಿಸಲು ಯಾವ ಆ್ಯಪ್ ಬಳಸುವರು?
ಜಾತಿ–ಮತ ಆಪ್. ಹೆಚ್ಚು ಮತ ಸೆಳೆಯಬಲ್ಲ ಜಾತಿಗೆ ಸೇರಿದವನಿಗೆ ಹೆಚ್ಚು ಪರಿಹಾರ.

ವಾಸಣ್ಣ, ಧಾರವಾಡ
ಜೀವ ಇರುವಾಗ ಪಿತೃಗಳಿಗೆ ಊಟ ಹಾಕದವರೂ ಪಿತೃಪಕ್ಷದಲ್ಲಿ ಭರ್ಜರಿ ಊಟ ಹಾಕುವರಲ್ಲ?
ಪ್ರೇತ ಹುಟ್ಟಿಸುವ ಭಯವನ್ನು ಪಿತೃ ಹುಟ್ಟಿಸುವುದಿಲ್ಲವಲ್ಲ.

ಸಿ.ಕೆ. ಗಣಪ್ಪನವರ, ಮುಂಡರಗಿ
ಹೆಣ್ಣೊಂದು ಕಲಿತರೆ ಶಾಲೆಯನ್ನು ತೆರೆದಂತೆ. ಗಂಡು ಕಲಿತರೆ?
ಹೆಣ್ಣು ತೆರೆದ ಶಾಲೆಗೆ ಟೀಚಿಂಗ್ ಸ್ಟಾಫ್ ದೊರೆತಂತೆ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಇಂದಿನ ಪೀಳಿಗೆ ಗುರುವಿನ ಗುಲಾಮನಾಗದೆ ಮೊಬೈಲ್ ದಾಸರಾಗಿ ವಿದ್ಯೆ ಕಲಿಯುತ್ತಿದ್ದಾರಲ್ಲ?
ಗೂಗಲ್ ಗುರುವಿನ ಮುಂದೆ ಕೆಲವು ಗುರುಗಳು ಗುಗ್ಗುಗಳಂತೆ ಕಾಣುವರಂತಲ್ಲ!

ಜೀವಿ, ಗೊಂಡೇದಹಳ್ಳಿ
ಸಾಮಾನ್ಯ ಜನರು ಪೊಲೀಸರಿಗೆ ಹೆದರುತ್ತಾರೆ. ಆದರೆ ಕಳ್ಳರು ಏಕೆ ಹೆದರುವುದಿಲ್ಲ?
ಸಾಮಾನ್ಯರಿಗೆ ಸಿಗದ ಪೊಲಿಟಿಕಲ್ ರಕ್ಷಣೆ ಕಳ್ಳರಿಗೆ ಸಿಗುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಮಕ್ಕಳು ಪ್ರಶ್ನಿಸಿದಾಗ ದೊಡ್ಡವರು 'ನೀ ಸುಮ್ಮನಿರು' ಎಂದು ಉತ್ತರಿಸುವುದೇಕೆ?
ಸೊಟ್ಟೂಗಿನವ ಮನೆಗೆ ಬಂದಾಗ 'ಅಂಕಲ್ ಮೂಗು ಹಾಗ್ಯಾಕೆ ಆಗಿದೆ?' ಎಂದರೆ ಉತ್ತರಿಸಲಾಗುವುದೆ? ಮಕ್ಕಳಲ್ಲಿ ಅಂತಹ ಪ್ರಶ್ನೆಗಳಿರುತ್ತವೆ.

ವಿನಾಯಕ ಕೆ. ರಾಮಗುಂಡಿ, ಬೈಲಹೊಂಗಲ
ಆನೆ ಸಾಕುವುದು ಸುಲಭ. ಆಸೆ ಸಾಕುವುದು ಹೇಗೆ ಸಾರ್?
ವಿವೇಕದ ಸರಪಳಿ ಕಟ್ಟಿ, ಪರಿಶ್ರಮದ ಆಹಾರವಿತ್ತರೆ ಆಸೆ ಹತೋಟಿಯಲ್ಲೇ ಇರುತ್ತದೆ.

ಮೃತ್ಯುಂಜಯ ಎ, ಪಾಂಡವಪುರ
ಪ್ರೀತಿಯಲ್ಲಿ ಏನಿದೆ?
ಬದುಕಿನ ರೀತಿ.

## ಬಹುಮಾನಿತ ಪ್ರಶ್ನೆ

ಬಿ. ಬಸವರಾಜ್, ಹರಿಹರ
ಕೆಲವೊಮ್ಮೆ 'ಸಾವನ್ನು ಗೆದ್ದವರು' ಎನ್ನುತ್ತಾರೆ. ನಿಜಕ್ಕೂ ಸಾವನ್ನು ಗೆಲ್ಲಲು ಸಾಧ್ಯವೆ?
ಹೆದ್ದಾರಿಯಲ್ಲಿ ಸಾಗಿ ಊರು ತಲುಪಿದಾಗಲೆಲ್ಲ ನಾವೇ ಗೆಲ್ಲುವುದು. ಸಾವಿಗೆ ಒಂದೇ ಗೆಲುವು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನ ಮನಸ್ಸು ಬ್ರೆಡ್ಡಿನಂತೆ ಮೃದುವಾಗಿದ್ದರೆ ಹೇಗಿರುತ್ತೆ ಸರ್?
ಗೊಂದಲ ಹತ್ತಿದರೆ ಸ್ಯಾಂಡ್‌ವಿಚ್ ಆಗಿಬಿಡುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು
ಕಾರಾಗೃಹ ಮತ್ತು ಬಿಗ್‌ಬಾಸ್; ಹೋಲಿಕೆ ಮತ್ತು ವ್ಯತ್ಯಾಸ ತಿಳಿಸಿ?
ಎರಡೂ ಕಡೆ ರೂಲ್ಸ್ ಇವೆ. ಅದು ನರ ಶಿಕ್ಷಾಲಯ; ಇದು ನರ ಮೃಗಾಲಯ.

ಎಂ.ಎ. ಕುಮಾರ್, ಬೆಂಗಳೂರು
ವಯಸ್ಸಾದವರು ಎಂತಹ ಕನಸು ಕಾಣುತ್ತಾರೆ?



ಹದಿಯರೆಯದವರೂ ನಾಚುವಂತಹದ್ದು!

ಅಮರಯ್ಯಾ ಪತ್ರಿಮಠ, ಸುರಪುರ
ವ್ಯಕ್ತಿ, ವ್ಯಕ್ತಿತ್ವಗಳ ಅಂತರವೇನು?
ವ್ಯಕ್ತಿ ಮರ, ವ್ಯಕ್ತಿತ್ವ ಫಲ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ದೈವ ದೊಡ್ಡದೋ, ಪರಿಶ್ರಮ ದೊಡ್ಡದೋ?
ದೈವ ಕಲ್ಪನೆ; ಪರಿಶ್ರಮ ವಾಸ್ತವ. ಕಲ್ಪನೆಗಿಂತ ಪರಿಶ್ರಮ ಎಂದಿಗೂ ದೊಡ್ಡದೇ.

ಎಂ.ಸಿ. ಧನ್ಯತಾ, ಬೆಂಗಳೂರು
ತುತ್ತಾ? ಮುತ್ತಾ?
ಮುತ್ತೇ. ಚಮಚಾಗಿರುವಾಗ ತುತ್ತಿಗೆ ಬೆಲೆಯಿಲ್ಲ.

■ ರಾಮ್